# ಉತ್ತಮ ಸರಳ ಜೀವನ

'ಸರಳ ಜೀವನ' ವಾಹಿನಿ ಈಗಷ್ಟೇ ತನ್ನ ಮೊದಲ ವರ್ಷ ಪೂರೈಸಿದ ಸಂಭ್ರಮದಲ್ಲಿದೆ. ಈ ವಾಹಿನಿಯಲ್ಲಿ ಹೊಸ ರೀತಿಯ ಕಾರ್ಯಕ್ರಮಗಳು ಪ್ರಸಾರವಾಗುತ್ತಿದ್ದು ವೀಕ್ಷಕರ ಮೆಚ್ಚುಗೆಗೆ ಪಾತ್ರವಾಗಿದೆ. ಇದುವರೆಗೂ ಧಾರಾವಾಹಿಯ ಬಲೆಗೆ ಬೀಳದೆ, ತನ್ನತನವನ್ನು ಉಳಿಸಿಕೊಂಡಿದೆ. 'ಅಜ್ಜಿ ಹೇಳಿದ ಕಥೆ' 'ಪುಣ್ಯಕ್ಷೇತ್ರ' 'ಅಂತಿಮ ದಿನಗಳು' ಮುಂತಾದ ಕಾರ್ಯಕ್ರಮಗಳು ಆಕರ್ಷಣೀಯವಾಗಿವೆ. ಹೆಚ್ಚು ಜಾಹಿರಾತುಗಳ ಹಾವಳಿಯೂ ಇಲ್ಲ. ಕೆಲವು ಕಾರ್ಯಕ್ರಮಗಳ ವಿವರಣೆ ಕೊಡುವವರು ವಿಷಯವನ್ನು ಪಾಠ ಓದಿದಂತೆ ಒಂದೇ ಸಮನೆ ಹೇಳುತ್ತ ಹೋಗುತ್ತಾರೆ. ಪದಗಳ ಅರ್ಥ, ಸಂದರ್ಭ, ಭಾವನೆಗಳಿಗೆ ಆಸ್ಪದವೇ ಇಲ್ಲ. ಹಾಗೂ ಧ್ವನಿಯ ಏರಿಳಿತ, ಶುದ್ಧ ಉಚ್ಚಾರಣೆ ಇಲ್ಲದೆ, ಅನೇಕ ವಿಷಯಗಳು ತಿಳಿಯುವುದೇ ಇಲ್ಲ. ಇಲ್ಲಿ ನಿರ್ದೇಶಕರ ಗಮನ ಬೇಕಾಗಿದೆ. ಇನ್ನು ಹಾಸ್ಯ ಕಾರ್ಯಕ್ರಮ 'ಕಚಗುಳಿ' ಬಹಳ ಸುಧಾರಿಸಬೇಕಿದೆ. ಅಲ್ಲಿ ಹಾಸ್ಯವೂ ಇಲ್ಲ. ಉತ್ತಮ ಮಟ್ಟವೂ ಇಲ್ಲ. ಇಂತಹ ಚಿಕ್ಕ ನ್ಯೂನತೆಗಳನ್ನು ಬಿಟ್ಟರೆ ಎಲ್ಲ ಕಾರ್ಯಕ್ರಮಗಳೂ ವೀಕ್ಷಕರನ್ನು ಮೆಚ್ಚಿಸಿವೆ.

-ಶ್ರೀನಾಥ್ ಕೊನೇಟಿ, ಬೆಂಗಳೂರು

# ಸಾಹಸಕ್ಕಿಂತ ಸೆರೆವಾಸ ಮುಖ್ಯ

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೋ) ಈಚೆಗೆ ಇತಿಹಾಸವೊಂದನ್ನು ನಿರ್ಮಿಸಿತು. ಒಂದೇ ರಾಕೆಟ್ ಮೂಲಕ 104 ಉಪಗ್ರಹಗಳನ್ನು ಏಕ ಕಾಲದಲ್ಲಿ ನಭಕ್ಕೆ ಚಿಮ್ಮಿಸಿ ಕಕ್ಷೆಗೆ ಸೇರಿಸುವ ವೈಜ್ಞಾನಿಕ ಸಾಧನೆ ಮೆರೆದು ವಿಶ್ವ ದಾಖಲೆಗೆ ಪಾತ್ರವಾಯಿತು. ಭಾರತದ ಈ ಮಹತ್ಸಾಧನೆಯನ್ನು ಬಿ.ಬಿ.ಸಿ. ಸುದ್ದಿ ವಾಹಿನಿಯೇ ಮೊದಲಾಗಿ ವಿದೇಶೀ ಸುದ್ದಿ ವಾಹಿನಿಗಳೂ ಅಗ್ರವಾರ್ತೆಯನ್ನಾಗಿ ಪ್ರಸಾರ ಮಾಡಿದವು. ಆದರೆ ನಮ್ಮ ಕನ್ನಡದ ಸುದ್ದಿವಾಹಿನಿಗಳು ಮಾತ್ರ ಕಾಟಾಚಾರಕ್ಕೆಂಬಂತೆ ಒಂದೆರಡು ಕ್ಷಣ ಸುದ್ದಿ ಒದರಿ ಸುಮ್ಮನಾದವು. ಇಸ್ರೋದ ಈ ಸಾಧನೆಯ ವಿವರಗಳು, ಪ್ರಯೋಜನಗಳು ಮೊದಲಾದ ಮೌಲಿಕ ಅಂಶಗಳನ್ನು ವೀಕ್ಷಕರಿಗೆ ವಿಷದವಾಗಿ ತಿಳಿಸುವ ಕೆಲಸ ಮಾಡಬಹುದಿತ್ತು, ಮಾಡಲಿಲ್ಲ, (ಒಂದೆರಡು ವಾಹಿನಿ ಹೊರತುಪಡಿಸಿ). ಆದರೆ, ಅದೇ ದಿನ, ತಮಿಳುನಾಡಿನ ಮೂವರು ಅಪರಾಧಿಗಳು ಬೆಂಗಳೂರಿನ ಜೈಲು ಪಾಲಾದ್ದನ್ನು ಬೆಳಗಿನಿಂದ ತಡರಾತ್ರಿತನಕ ಕೊರೆದವು. ತೋರಿಸಿದ ತುಣುಕುಗಳನ್ನೇ ಮತ್ತೆ ಮತ್ತೆ ತೋರಿಸುತ್ತ ಅವೇ ಒಣ ಮಾತುಗಳನ್ನೇ ಮತ್ತೆ ಮತ್ತೆ ಅರಚುತ್ತ ಕಾಲ ಕಳೆದವು. ಟಿ.ಆರ್.ಪಿ.ಯ ನೆಪದಲ್ಲಿ ತೀರಾ ಇಷ್ಟು ಅಧೋಗತಿಗಿಳಿಯುವುದು, ವೀಕ್ಷಕರ ಅಭಿರುಚಿಯನ್ನೇ ಅಪಮೌಲ್ಯಗೊಳಿಸಲು ಯತ್ನಿಸುವುದು, ಜ್ಞಾನ–ವಿಜ್ಞಾನಾಭಿಲಾಷಿ ವೀಕ್ಷಕರನ್ನು ವಂಚಿಸುವುದು ತರವೇ? ನಾಳೆ ದೇಶವನ್ನು ಮುನ್ನಡೆಸಬೇಕಾದ ಇಂದಿನ ವಿದ್ಯಾರ್ಥಿಗಳಿಗಾದರೂ ನಮ್ಮ ವೈಜ್ಞಾನಿಕ ಸಾಧನೆಯ ವಿವರವಾದ ಪರಿಚಯ ಮಾಡಿಕೊಡಬೇಕೆಂಬ (ಕರ್ತವ್ಯ) ಪ್ರಜ್ಞೆಯಾದರೂ ನಮ್ಮ ಸುದ್ದಿ ವಾಹಿನಿಗಳಿಗೆ ಬೇಡವೇ?

ದೇಶದ ಹಿತದೃಷ್ಟಿಯಿಂದ ದೇಶ ಕಟ್ಟುವ ಕಾರ್ಯಗಳಿಗೆ ಪ್ರಾಮುಖ್ಯತೆ ನೀಡಬೇಕಾಗಿರುವುದು ಸಾರ್ವಜನಿಕ ಮಾಧ್ಯಮಗಳ ಹೊಣೆಗಾರಿಕೆ ಹೌದು ತಾನೇ..?

– ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು,
ರಮಣ್ ಶೆಟ್ಟಿ ರೆಂಜಾಳ್, ಮುಂಬೈ

ವಾರದ ಪತ್ರ

# ವಾಹಿನಿಗಳಲ್ಲಿ 'ಕಾಮಿಡಿ' ಪೈಪೋಟಿ

ಪ್ರಸಕ್ತ ದಿನಗಳಲ್ಲಿ ಹೆಚ್ಚುತ್ತಿರುವ ಹೊಸ ಟಿ.ವಿ. ವಾಹಿನಿಗಳು ಹಾಗೂ ಹಳೆಯ ವಾಹಿನಿಗಳ ನಡುವೆ ಅತಿರೇಕವೆನಿಸುವಷ್ಟು ಹಾಸ್ಯ (ಕಾಮಿಡಿ) ಕಾರ್ಯಕ್ರಮಗಳು ಪ್ರಸಾರವಾಗುತ್ತಿವೆ. ಕಾಮಿಡಿ ರೇಸ್‌ನಲ್ಲಿ ತಾವು ಕಡಿಮೆಯಿಲ್ಲವೆನ್ನುವುದನ್ನು ತೋರಿಸಲು 'ಅಪರಾ –ತಪರಾ' ಹಾಸ್ಯವನ್ನು ವೀಕ್ಷಕರಿಗೆ ಉಣಬಡಿಸುತ್ತಾ ಮತ್ತು ಹಲವಾರು ವೀಕ್ಷಕರನ್ನು ಎದುರಿನಲ್ಲಿ ಕೂರಿಸಿಕೊಂಡು ಅವರಿಂದ ಬಲವಂತದ ನಗುವನ್ನು ಹೊರಹೊಮ್ಮಿಸುತ್ತಿರುವುದು ನಗೆಪಾಟಲಿನ ಹಾಸ್ಯವಾಗುತ್ತಿದೆ. ಕೆಲವು ವಾಹಿನಿಗಳು 'ಸೆಕ್ಸ್' ವಿಷಯವನ್ನು ನಡುವೆ ತೂರಿಸಿ ಅದನ್ನು ಕಾಮಿಡಿ ದೃಶ್ಯವನ್ನಾಗಿಸುತ್ತಿರುವುದು ಶೋಭೆ ತರುತ್ತಿಲ್ಲ. ಇನ್ನು ಕೆಲವೊಂದು ವಾಹಿನಿಗಳವರು ದೇವ–ದೇವಿಯರನ್ನು ಕಾರ್ಯಕ್ರಮದಲ್ಲಿ ತೂರಿಸಿ ವೀಕ್ಷಕರನ್ನು ನಗಿಸಲು ಪ್ರಯತ್ನಿಸುತ್ತಿರುವುದು ದುರಂತ.

– ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

# ಜೀವಕಳೆಯ ಪದ್ಮಾವತಿ

ಇತ್ತೀಚೆಗೆ ಕಲರ್ಸ್ ಕನ್ನಡ ವಾಹಿನಿಯಲ್ಲಿ ಸೋಮವಾರದಿಂದ ಶುಕ್ರವಾರದವರೆಗೆ ರಾತ್ರಿ 9.30ರ ವೇಳೆಯಲ್ಲಿ ಪ್ರಸಾರಗೊಳ್ಳುತ್ತಿರುವ 'ಪದ್ಮಾವತಿ' ಧಾರಾವಾಹಿ ವೀಕ್ಷಕರನ್ನು ತಲುಪಲು ಸಫಲವಾಗುತ್ತಿದೆ ಎಂದು ಹೇಳಬಹುದು.

ಸೊಬಗಿನ ಪರಿಸರ, ಭಕ್ತಿ, ಪ್ರೀತಿ, ಆಸ್ತಿಕರ ಮತ್ತು ನಾಸ್ತಿಕರ ನಡುವಿನ ಸಂಘರ್ಷಗಳ ಸುತ್ತ ಹೆಣೆದಿರುವ ಕಥಾನಕ ಶೈಲಿ ಅಚ್ಚುಕಟ್ಟಿನ ಪರಿಧಿಯಲ್ಲಿ ಅಭಿವ್ಯಕ್ತಗೊಳ್ಳುತ್ತಿದೆ. ಆಯಾ ಪಾತ್ರಗಳಲ್ಲಿ ಜೀವಕಳೆಯ ಸೆಲೆ ತುಂಬಿದೆ.

–ಪೂರ್ಣಿಮಾ ಮೂರ್ತಿ, ಬೆಂಗಳೂರು

# ನಿರ್ದೇಶಕರಿಗೆ ಅರಿವು ಇರಲಿ

ಉತ್ತಮ ಧಾರಾವಾಹಿಗಳಿಗೆ ಹೆಸರಾಗಿದ್ದ ಕಲರ್ಸ್ ಕನ್ನಡ ಇಂದು ಸತ್ವ ಇಲ್ಲದ ಧಾರಾವಾಹಿಗಳಿಂದಾಗಿ ಬಣ್ಣ ಕಳೆದುಕೊಂಡಿದೆ. ಲಕ್ಷ್ಮೀ ಬಾರಮ್ಮ, ಪುಟ್ಟಗೌರಿ ಮದುವೆ, ಮನೆದೇವ್ರು ಧಾರಾವಾಹಿಗಳು ನೈಜತೆಯನ್ನು ಕಳೆದುಕೊಂಡಿವೆ. ವೀಕ್ಷಕರ ತಾಳ್ಮೆಯನ್ನು ಪರೀಕ್ಷಿಸುತ್ತಿವೆ. ಇಪ್ಪತ್ತೊಂದನೇ ಶತಮಾನದಲ್ಲಿರುವ ವೀಕ್ಷಕರ ಬಗ್ಗೆ ವಾಹಿನಿಗೆ, ನಿರ್ದೇಶಕರಿಗೆ ತಿಳಿದಿಲ್ಲವೇ? ಧಾರಾವಾಹಿಗಳಲ್ಲಿ ಬಿಂಬಿಸಲಾಗುವ, ಹಿಂಸೆ, ಕ್ರೌರ್ಯ ಸಮಾಜಕ್ಕೆ ಯಾವ ಸಂದೇಶ ನೀಡುತ್ತಿವೆ ಎಂಬ ಅರಿವೂ ವಾಹಿನಿಯ ನಿರ್ದೇಶಕರಿಗಿಲ್ಲವೇ? ವೀಕ್ಷಕರ ನೆಮ್ಮದಿ ಕೆಡಿಸುವ ಈ ಕಥೆಗೆ ಬೇಗ ಇತಿಶ್ರೀ ಹಾಡಲಿ.

–ಸೌಮ್ಯಶ್ರೀ ಎನ್., ಇಳಂತಿಲ

# ಗ್ರಾಮ ರಾಜಕೀಯ

ಇದುವರೆಗೆ ಏಕತಾನತೆಯಿಂದ ಕೂಡಿದ್ದ 'ಕಿನ್ನರಿ' ಧಾರಾವಾಹಿ (ಕಲರ್ಸ್) ಈಗ ಸ್ವಲ್ಪ ತಿರುವು ಪಡೆದಿದೆ. ಗ್ರಾಮಗಳಲ್ಲಿ ರಾಜಕೀಯ ವಿಷ ವರ್ತುಲ ಪಸರಿಸಿ, ಅಲ್ಲಿನ ಜನತೆ ಅನ್ಯಾಯ, ಅಕ್ರಮ ಯೋಜನೆಗಳ ಹಣ ದುರ್ಬಳಕೆ ಮತ್ತು ಸ್ಥಳೀಯ ಮುಖಂಡರ ದಬ್ಬಾಳಿಕೆ ಅನುಭವಿಸುತ್ತಿರುವುದರ ಯಥಾವತ್ತು ಪ್ರತಿಫಲನ.

–ಸುಂದರ್, ಬೆಂಗಳೂರು

# ಕೀಳು ಅಭಿರುಚಿ

ಕಿಚ್ಚ ಸುದೀಪ್ ನಿರ್ಮಾಣದ ಧಾರಾವಾಹಿ 'ವಾರಸ್ದಾರ' ಕೀಳು ಅಭಿರುಚಿಯಿಂದ ಕೂಡಿದೆ. ವಾರಸ್ದಾರ ಹೆಣ್ಣೋ ಗಂಡೋ ತಿಳಿದುಕೊಳ್ಳಲು ಅಂಗ ಪರೀಕ್ಷೆ ನಡೆಯಿತು. ಆಗ ನಕಲಿ ಮಗು ತೋರಿಸಿ ಅಸಲಿ ಮಗುವನ್ನು ಮುಚ್ಚಿ ಹಾಕಲಾಯಿತು. ತದನಂತರ ಸ್ನಾನ ಮಾಡುವಾಗ ಹೆಣ್ಣು ಗಂಡು ರಹಸ್ಯ ಬದಲಾಗುವುದೆ ಎನ್ನುವ ಅಡಿಬರಹ ತೋರಿಸಲಾಯಿತು. ಸದ್ಯ ಪ್ರೇಕ್ಷಕರ ಪುಣ್ಯ ಸ್ನಾನದ ದೃಶ್ಯದಲ್ಲಿ ವಾರಸ್ದಾರ ಭಾಗಿಯಾಗಲಿಲ್ಲ.

– ಎಸ್.ಎನ್.ಮಹಾಬಲರಾವ್, ನರಸಿಂಹರಾಜಪುರ

# ಸುಂದರ ಸಂಗಮ

ಇತ್ತೀಚೆಗೆ ತಲೆ ಚಿಟ್ಟು ಹಿಡಿಸುವ, ಎಂದೆಂದೂ ಮುಗಿಯದ ಮತ್ತು ಒಂದೇ ಕಥೆಯನ್ನು ಹೇಳುವ ಧಾರಾವಾಹಿಗಳ ಹಾವಳಿಯ ಮಧ್ಯೆ ಸ್ಟಾರ್ ಸುವರ್ಣದ 'ತ್ರಿವೇಣಿ ಸಂಗಮ' ತಂಗಾಳಿಯಂತೆ ಮೂಡಿ ಬರುತ್ತಿದೆ. ಅತ್ಯುತ್ತಮ ನಟನೆ, ಕಥೆ ಮತ್ತು ಸಂಭಾಷಣೆಗಳು ಇತರ ಧಾರಾವಾಹಿಗಳನ್ನು ಮೀರಿಸಿದೆ. ವೀಕ್ಷಕರ ಆತಂಕವೆಂದರೆ ತೀರಾ ವೇಗವಾಗಿ ಓಡುತ್ತಿರುವ ಧಾರಾವಾಹಿ ಬೇಗ ಮುಗಿದರೆ, ಮತ್ತದೇ ಜೊಳ್ಳು ಧಾರಾವಾಹಿಗಳನ್ನು ನೋಡಬೇಕಲ್ಲಾ ಎಂಬುದೇ ಆಗಿದೆ.

–ಮಧುಸೂಧನ. ಬಿ.ಎಸ್, ಬೆಂಗಳೂರು